**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತ ಮೂರನೆಯ ಅಧಿವೇಶನ**

# ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–39)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991ರ ಕರ್ನಾಟಕ ಅಧಿನಿಯಮ ಸಂ. 7)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991ರ ಕರ್ನಾಟಕ ಅಧಿನಿಯಮ ಸಂ. 7)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ ,-

(i) (2)ನೇ ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

> "(2ಎ) "ಹೊರಗುತ್ತಿಗೆ ಮೇರೆಗೆ ನೇಮಕಾತಿ" ಎಂದರೆ ರಾಜ್ಯ ನಾಗರೀಕ ಸೇವೆಗಳ ವೃಂದದಲ್ಲಿನ ಅಥವಾ ಸಾರ್ವಜನಿಕ ವಲಯದ ಸಂಸ್ಥೆಗಳ ಯಾವುದೇ ಹುದ್ದೆಗೆ, ಸರ್ಕಾರದಿಂದ ಮಾನ್ಯತೆ ಪಡೆದ ಮಾನವಶಕ್ತಿ ಪೂರೈಕೆ ಏಜೆನ್ಸಿಯಿಂದ ನೇರ ನೇಮಕಾತಿ ಕೋಟಾದ ಎದುರಿಗೆ ಮಾಡುವ ನೇಮಕಾತಿ."

(ii) (4)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4ಎ) "ಅವಧಿ ನಿರ್ದಿಷ್ಟ ಹುದ್ದೆ" ಅಥವಾ "ಸಾವಧಿಕ ಹುದ್ದೆ" ಎಂದರೆ ಸರ್ಕಾರಿ ನೌಕರನು ರಾಜ್ಯ ಸರ್ಕಾರದಡಿಯಲ್ಲಿನ ಅಥವಾ ಸರ್ಕಾರಿ ವಲಯದ ಸೇವೆ ಅಥವಾ ಹುದ್ದೆಯಲ್ಲಿ ಮರು ನೇಮಕಾತಿಯಿಲ್ಲದೆ ನಲವತ್ತೈದು ದಿನಗಳಿಗಿಂತ ಹೆಚ್ಚಲ್ಲದ ಅವಧಿಯವರೆಗೆ ಹೊಂದಿರುವ ಶಾಶ್ವತ ಹುದ್ದೆ."

(iii) (8)ನೇ ಖಂಡದಲ್ಲಿ,-

> (ಎ) ಉಪಖಂಡ (i)ರಲ್ಲಿ "ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ಎರಡನೇ ತಿದ್ದುಪಡಿ) ಅಧಿನಿಯಮ, 2004ರ (ಇಲ್ಲಿ ಇನ್ನು ಮುಂದೆ ಎರಡನೇ ತಿದ್ದುಪಡಿ ಅಧಿನಿಯಮ 2004 ಎಂದು ಉಲ್ಲೇಖಿಸಲಾಗಿದೆ)" ಎಂಬ ಪದಗಳು, ಅಂಕಿಗಳು

ಮತ್ತು ಆವರಣ ಚಿಹ್ನೆಗಳ ಬದಲಾಗಿ "ಪ್ರತಿ ನೇರ ನೇಮಕಾತಿಯ ಸಮಯದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪಖಂಡ (ii) ಮತ್ತು (iii) ರಲ್ಲಿ "ಎರಡನೇ ತಿದ್ದುಪಡಿ ಅಧಿನಿಯಮ 2004ರ" ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ "ಪ್ರತಿ ನೇರ ನೇಮಕಾತಿಯ ಸಮಯದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ ,-

(i) (ಎ), (ಬಿ) ಮತ್ತು (ಸಿ) ಖಂಡಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸಂಶೋಧನೆಯನ್ನು ನಡೆಸಲು ಅಥವಾ ಮಾರ್ಗದರ್ಶನ ನೀಡಲು ಅಥವಾ ನಿರ್ದೇಶನ ನೀಡುವುದಕ್ಕಾಗಿ ಇರುವ ಗ್ರೂಪ್ 'ಎ' ದರ್ಜೆ (ಹಿರಿಯ ಶ್ರೇಣಿ) ವೃಂದದ ಮೇಲಿನ ಹುದ್ದೆಗಳು;

(ಬಿ) ವೈಜ್ಞಾನಿಕ ಹುದ್ದೆಗಳೆಂದು ವರ್ಗೀಕರಿಸಲಾದ ಗ್ರೂಪ್ 'ಎ' ದರ್ಜೆ (ಕಿರಿಯ ಶ್ರೇಣಿ) ವೃಂದದ ಮೇಲಿನ ಹುದ್ದೆಗಳು;

(ಸಿ) 45 ದಿನಗಳಿಗಿಂತ ಕಡಿಮೆ ಅವಧಿಗಾಗಿ ತಾತ್ಕಾಲಿಕ, ಅರೆಕಾಲಿಕ, ಗುತ್ತಿಗೆ ಆಧಾರದ ಮೇಲೆ ತುಂಬಲಾದ ಅವಧಿ ನಿರ್ದಿಷ್ಟ ಹುದ್ದೆಗಳು ಅಥವಾ ಸಾವಧಿಕ ಹುದ್ದೆಗಳು."

(ii) (ಡಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

**4. 4ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ ,-

(i) (1ಎ) ಉಪ-ಪ್ರಕರಣದಲ್ಲಿ ಎರಡು ಕಡೆಗಳಲ್ಲಿ ಬರುವ "ಎರಡನೇ ತಿದ್ದುಪಡಿ ಅಧಿನಿಯಮ 2004ರ" ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ "ಪ್ರತಿ ನೇರ ನೇಮಕಾತಿಯ ಸಮಯದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (4)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ರಾಜ್ಯ ಸಿವಿಲ್ ಸೇವೆಗಳ ವೃಂದದಲ್ಲಿನ ಅಥವಾ ಸರ್ಕಾರಿ ವಲಯದ ಸಂಸ್ಥೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿ ಕೋಟಾದ ಎದುರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ, ಸರ್ಕಾರದಿಂದ ಮಾನ್ಯತೆ ಪಡೆದ ಮಾನವಶಕ್ತಿ ಪೂರೈಕೆ ಏಜೆನ್ಸಿಯು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ನಿಯಮಿಸಬಹುದಾದ ಅಂಥ ವ್ಯಾಪ್ತಿ ಮತ್ತು ವಿಧಾನದಲ್ಲಿ ಸಾಕಷ್ಟು ಪ್ರಾತಿನಿಧ್ಯ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು:

ಪರಂತು, ಹೊರಗುತ್ತಿಗೆ ಆಧಾರದ ಮೇಲಿನ ನೇಮಕಾತಿಯು ತಾತ್ಕಾಲಿಕ ಆಧಾರದಲ್ಲಿರತಕ್ಕದ್ದು ಮತ್ತು ಅದನ್ನು ನೇರ ನೇಮಕಾತಿ ಕೋಟಾದ ಎದುರು ಕ್ರಮಬದ್ಧಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಹೊರಗುತ್ತಿಗೆ ಆಧಾರದ ಮೇಲಿನ ನೇಮಕಾತಿಯು ನೇರ ನೇಮಕಾತಿ ಎದುರಾಗಿ ಮಂಜೂರಾದ ಹುದ್ದೆಗಳ ಶೇಕಡಾ ಹತ್ತರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೆ ಮೊದಲು ಹೊರಗುತ್ತಿಗೆ ಆಧಾರದ ಮೇಲಿನ ನೇಮಕಾತಿಯು ಮಂಜೂರಾದ ಹುದ್ದೆಗಳ ಸಂಖ್ಯಾಬಲದ ಶೇಕಡಾ ಹತ್ತರಷ್ಟು ಮೀರಿದ್ದರೆ, ಆಗ ಅಂಥ ನೇಮಕಾತಿಗಳನ್ನು ಪ್ರತಿ ವರ್ಷ ಶೇಕಡಾ ಹತ್ತರಷ್ಟು ಕಡಿಮೆಗೊಳಿಸತಕ್ಕದ್ದು.

(6) ಹೊರಗುತ್ತಿಗೆ ನೇಮಕಾತಿ ಮತ್ತು ಏಜೆನ್ಸಿಯ ಮಾನ್ಯತೆಯ ಕುರಿತು ನಿಬಂಧನೆಗಳು ಮತ್ತು ಷರತ್ತುಗಳನ್ನು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶದ ಮೂಲಕ ನಿರ್ದಿಷ್ಟಪಡಿಸತಕ್ಕದ್ದು."

**5. 4ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ಎ ಪ್ರಕರಣದಲ್ಲಿ (5)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) ತಹಶೀಲ್ದಾರನು ಯಾವುದೇ ಸಮಯದಲ್ಲಿ ಸ್ವಯಂ ಪ್ರೇರಿತವಾಗಿ ಅಥವಾ ಯಾರೇ ವ್ಯಕ್ತಿಯಿಂದ ಆತನಿಗೆ ಸಲ್ಲಿದ ಅರ್ಜಿಯ ಮೇಲೆ ಸುಳ್ಳು ಜಾತಿ ಪ್ರಮಾಣಪತ್ರದ ಕುರಿತು ಜಾತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆತನ ಅಭಿಪ್ರಾಯದಲ್ಲಿ ಯಾರ ವಿರುದ್ಧ ತಪ್ಪು ಮಾಹಿತಿ ನೀಡಿ ಜಾತಿ ಪ್ರಮಾಣ ಪತ್ರ ಪಡೆದಿರುವ ಆರೋಪವಿದೆಯೋ ಅದು ನಿಜವೆಂದು ಕಂಡುಬಂದಲ್ಲಿ, ಅವನಿಗೆ ನೀಡಿದ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸತಕ್ಕದ್ದು:

ಪರಂತು, ತಹಶೀಲ್ದಾರನು ಅಂಥ ವ್ಯಕ್ತಿಗೆ ಆತನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಯಾವುದೇ ರದ್ದತಿ ಆದೇಶವನ್ನು ಹೊರಡಿಸತಕ್ಕದ್ದಲ್ಲ".

**6. 4ಡಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ಡಿ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ "ಭಾವಿಸಬಹುದಾದಂಥ ಆದೇಶವನ್ನು" ಎಂಬ ಪದಗಳ ತರುವಾಯ "ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**7. 4ಎಫ್ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ಎಫ್ ಪ್ರಕರಣದ (2)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಉಪ-ಪ್ರಕರಣ (1)ರಡಿಯಲ್ಲಿ ಆದೇಶಗಳನ್ನು ಹೊರಡಿಸಿದ ನಂತರ ಡೆಪ್ಯೂಟಿ ಕಮೀಷನರು, ಸಂಬಂಧಪಟ್ಟ ತಹಶೀಲ್ದಾರನು ಸುಳ್ಳು ಜಾತಿ ಪ್ರಮಾಣಪತ್ರವನ್ನು ನೀಡಿರುವುದಕ್ಕಾಗಿ ಆತನ್ನು ಅಮಾನತ್ತಿನಲ್ಲಿಡುವಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗೆ ವರದಿ ನೀಡತಕ್ಕದ್ದು. ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಯು ವರದಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ವಿಚಾರಣೆಯನ್ನು ಬಾಕಿಯಿರಿಸಿ, ವರದಿಯ ಮೇಲೆ ಕ್ರಮವಹಿಸತಕ್ಕದ್ದು.

(4) ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ತಪ್ಪು ವರದಿಯನ್ನು ಶಿಫಾರಸ್ಸು ಮಾಡಲು ಮತ್ತು ಸಲ್ಲಿಸಲು ಜವಾಬ್ದಾರರಾಗಿರುವ ಇತರ ಅಧಿಕಾರಿಗಳ ಸಂದರ್ಭದಲ್ಲಿ, ಡೆಪ್ಯೂಟಿ ಕಮೀಷನರು ವಿಚಾರಣೆಯನ್ನು ಬಾಕಿಯಿರಿಸಿ ತಕ್ಷಣದಿಂದ ಅವರನ್ನು ಅಮಾನತುಗೊಳಿಸತಕ್ಕದ್ದು."

**8. 5ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 5ಎ ಪ್ರಕರಣದಲ್ಲಿ "ಒಂದು ಸಾವಿರ ರೂಪಾಯಿಗಳಿಗೆ" ಮತ್ತು "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಐದು ಸಾವಿರ ರೂಪಾಯಿಗಳಿಗೆ" ಮತ್ತು "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**9. 5ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 5ಬಿ ಪ್ರಕರಣದಲ್ಲಿ "ಒಂದು ಸಾವಿರ ರೂಪಾಯಿಗಳಿಗೆ" ಮತ್ತು "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಐದು ಸಾವಿರ ರೂಪಾಯಿಗಳಿಗೆ" ಮತ್ತು "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**10. 5ಸಿ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 5ಬಿ ಪ್ರಕರಣದ ತರುವಾಐ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**5ಸಿ. ವರದಿ ಮಾಡುವ ಅಧಿಕಾರಿ ಮತ್ತು ಸಿಬ್ಬಂದಿಗೆ ಸುಳ್ಳು ವರದಿ ಸಲ್ಲಿಕೆಗಾಗಿ ದಂಡನೆ.- (1)** ಜಾತಿ ಪ್ರಮಾಣಪತ್ರ ಪ್ರಕರಣಗಳ ಕುರಿತು ವಿಚಾರಣಾ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಯು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯರಲ್ಲದ ವ್ಯಕ್ತಿಯನ್ನು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸಿಂಧುತ್ವ ಪ್ರಮಾಣಪತ್ರ ಅಥವಾ ಜಾತಿ ಪ್ರಮಾಣಪತ್ರವನ್ನು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಅಥವಾ ತಹಶೀಲ್ದಾರರಿಂದ ಅನುಕ್ರಮವಾಗಿ ಪಡೆದುಕೊಳ್ಳಲು ಸಾಧ್ಯವಾಗುವಂತೆ ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಯಾವುದೇ ವರದಿಯನ್ನು ಸಿದ್ಧಪಡಿಸಿದರೆ ಮತ್ತು ಅದನ್ನು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗೆ ಸಲ್ಲಿಸಿದರೆ, ಕ್ರಿಮಿನಲ್ ಕ್ರಮಕ್ಕೆ ಗುರಿಯಾಗತಕ್ಕದ್ದು ಮತ್ತು ಅಪರಾಧನಿರ್ಣೀತನಾದ ಮೇಲೆ, ಆರು ತಿಂಗಳಿಗಿಂತ ಕಡಿಮೆಯಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಸುಳ್ಳು ವರದಿಯನ್ನು ಸಲ್ಲಿಸುವ ಅಧಿಕಾರಿ ಅಥವಾ ಸಿಬ್ಬಂದಿಯ ಕರ್ತವ್ಯ ಲೋಪಕ್ಕಾಗಿ ಸಂಬಂಧಿತ ಸೇವಾ ನಿಯಮಗಳಡಿಯಲ್ಲಿ ಇಲಾಖಾ ಶಿಸ್ತು ಕ್ರಮಕ್ಕೂ ಸಹ ಹೊಣೆಗಾರರಾಗಿರತಕ್ಕದ್ದು.

**11. 8ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ ,-

(i) ಶೀರ್ಷಿಕೆಯ ತರುವಾಯ ಅಸ್ತಿತ್ವದಲ್ಲಿರುವ ಉಪಬಂಧವನ್ನು ಉಪ-ಪ್ರಕರಣ (1) ಎಂಬುದಾಗಿ ಮರುಸಂಖ್ಯೆ ನೀಡತಕ್ಕದ್ದು, ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪ-ಪ್ರಕರಣದಲ್ಲಿ,-

(ಎ) ಖಂಡ (ಡಿ) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ-1) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ – ಪದಮಿತ್ತ ಸದಸ್ಯ."

(ಬಿ) ಖಂಡ (ಇ)-ನಲ್ಲಿ "ಮತ್ತು ಕಾರ್ಮಿಕ ಇಲಾಖೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪ-ಪ್ರಕರಣ ಮತ್ತು ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಸ್ಥಾಯಿ ಸಮಿತಿಯು ವರ್ಷದಲ್ಲಿ ಕನಿಷ್ಟ ಎರಡು ಬಾರಿ ಸಭೆ ಸೇರತಕ್ಕದ್ದು."

**12. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲ ಸದನಗಳ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991ರ ಕರ್ನಾಟಕ ಅಧಿನಿಯಮ ಸಂ. 7)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(i) ಅಧಿನಿಯಮದಲ್ಲಿನ ಅಸ್ಪಷ್ಟತೆಯನ್ನು ತೊಡೆದುಹಾಕುವುದಕ್ಕೆ "ಸಾವಧಿಕ ಹುದ್ದೆಗಳು' ಎಂಬುದನ್ನು ಪರಿಭಾಷಿಸುವುದು;

(ii) ಮುಂದುವರೆದ ಪ್ರಕ್ರಿಯೆಗಾಗಿ "ಭರ್ತಿಯಾಗದ ಖಾಲಿಸ್ಥಾನಗಳು" ಎಂಬುದನ್ನು ಪರಿಭಾಷಿಸುವುದು;

(iii) ಸರ್ಕಾರಿ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ವಿಶ್ವವಿದ್ಯಾಲಯಗಳು ಮುಂತಾದವುಗಳಲ್ಲಿ ಗುತ್ತಿಗೆ ಆಧಾರದ ಮೇಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಮೀಸಲಾತಿಗೆ ವಿವಿಧ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮೀಸಲಾತಿಯನ್ನು ಕಲ್ಪಿಸುವುದು;

(iv) ನೇರ ನೇಮಕಾತಿ ಕೋಟಾದ ಎದುರಿಗೆ ಹೊರಗುತ್ತಿಗೆ ಆಧಾರದ ಮೇಲಿನಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನುಸರಿಸುವುದು; ಮತ್ತು

(v) ಅಂಥ ಇತರ ಕೆಲವು ಆನುಷಂಗಿಕ ತಿದ್ದುಪಡಿಗಳನ್ನೂ ಸಹ ಮಾಡುವುದು.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 4:** | (ii)ನೇ ಉಪ-ಖಂಡವು, ರಾಜ್ಯ ಸಿವಿಲ್ ಸೇವೆಗಳ ವೃಂದದಲ್ಲಿನ ಅಥವಾ ಸರ್ಕಾರಿ ವಲಯದ ಸಂಸ್ಥೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿ ಕೋಟಾದ ಎದುರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ, ಸರ್ಕಾರದಿಂದ ಮಾನ್ಯತೆ ಪಡೆದ ಮಾನವಶಕ್ತಿ ಪೂರೈಕೆ ಏಜೆನ್ಸಿಯು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ವ್ಯಾಪ್ತಿ ಮತ್ತು ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಡಾ. ಹೆಚ್.ಸಿ ಮಹದೇವಪ್ಪ**
ಸಮಾಜ ಕಲ್ಯಾಣ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 (1991ರ ಕರ್ನಾಟಕ ಅಧಿನಿಯಮ ಸಂ. 7)ರ ಉದ್ಧೃತ ಭಾಗ

**XXX XXX XXX**

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(1) ``ಗೊತ್ತುಪಡಿಸಲಾದ ದಿನಾಂಕ'' ಎಂದರೆ, 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಆಡಿಯಲ್ಲಿ ಅಧಿಸೂಚಿತವಾದ ದಿನಾಂಕ;

(2) ಸೇವೆ ಅಥವಾ ಹುದ್ದೆಗಳ ಸಂಬಂಧದಲ್ಲಿ ``ನೇಮಕಾತಿ ಪ್ರಾಧಿಕಾರಿ'' ಎಂದರೆ, ಅಂಥ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅಧಿಕಾರ ಹೊಂದಿರುವ ಪ್ರಾಧಿಕಾರಿ;

(3) ``ಸರ್ಕಾರಿ ವಲಯದ ಸಂಸ್ಥೆಗಳು,'' ಎಂದರೆ,-

(i) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಒಂದು ಸಹಕಾರಿ ಸಂಘ ;

(ii) ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಒಂದು ಶಿಕ್ಷಣ ಸಂಸ್ಥೆ;

(iii) ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಕಂಪನಿ;

(iv) ಒಂದು ಸ್ಥಳೀಯ ಪ್ರಾಧಿಕಾರ;

(v) ರಾಜ್ಯ ಅಥವಾ ಕೇಂದ್ರ ಅಧಿನಿಯಮಗಳ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಶಾಸನಪ್ರದತ್ತ ನಿಕಾಯ ಅಥವಾ ನಿಗಮ;

(vi) ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಭಾವಿಸಲಾದ ಒಂದು ವಿಶ್ವವಿದ್ಯಾನಿಲಯ;

(4) ``ಇತರ ಹಿಂದುಳಿದ ವರ್ಗಗಳು'' ಎಂದರೆ, ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡ ಮತ್ತು 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಆಗಿಂದಾಗ್ಗೆ ರಾಜ್ಯ ಸರ್ಕಾರದ ಮೂಲಕ ಅಧಿಸೂಚಿತವಾದ ಕೋಮುಗಳು, ಜಾತಿಗಳು, ಮತ್ತು ಬುಡಕಟ್ಟುಗಳು;

(5) ``ಅನುಸೂಚಿತ ಜಾತಿಗಳು'' ಎಂಬುದು ಭಾರತದ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಮತ್ತು ಆಗಿಂದಾಗ್ಗೆ ತಿದ್ದುಪಡಿಗೊಳಿಸಲಾದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಲಾದ ಅನುಸೂಚಿತ ಜಾತಿಗಳಿಗೆ ಉಲ್ಲೇಖ ಹೊಂದಿರತಕ್ಕದ್ದು;

(6) ``ಅನುಸೂಚಿತ ಬುಡಕಟ್ಟುಗಳು'' ಎಂಬುದು, ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಮತ್ತು ಆಗಿಂದಾಗ್ಗೆ ತಿದ್ದುಪಡಿಗೊಳಿಸಲಾದ ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950ರಲ್ಲಿ ನಿರ್ದಿಷ್ಟಗೊಳಿಸಲಾದ ಅನುಸೂಚಿತ ಬುಡಕಟ್ಟುಗಳಿಗೆ ಉಲ್ಲೇಖ ಹೊಂದಿರತಕ್ಕದ್ದು.

(7) ``ಸೇವೆ ಅಥವಾ ಹುದ್ದೆ'' ಎಂದರೆ ಕರ್ನಾಟಕ ರಾಜ್ಯದ ಸಿವಿಲ್ ಸೇವೆ ಅಥವಾ ಕರ್ನಾಟಕ ರಾಜ್ಯದಡಿಯ ಒಂದು ಸಿವಿಲ್ ಹುದ್ದೆ ಮತ್ತು ಇದು ಸರ್ಕಾರಿ ವಲಯದ ಸಂಸ್ಥೆಯಲ್ಲಿರುವ ಒಂದು ಸೇವೆ ಅಥವಾ ಹುದ್ದೆಯನ್ನು ಒಳಗೊಳ್ಳುತ್ತದೆ.

(8) ``ಭರ್ತಿ ಮಾಡದ ಖಾಲಿ ಹುದ್ದೆಗಳು'' ಎಂಬುದು ಈ ಮುಂದಿನ ಅರ್ಥ ಹೊಂದಿದ್ದು ಅವುಗಳನ್ನು ಒಳಗೊಳ್ಳುತ್ತದೆ,

ಎಂದರೆ:-

(i) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 19 ಎಸ್‌ಬಿಸಿ 89 ದಿನಾಂಕ: 12ನೇ ಜುಲೈ 1989 ಮತ್ತು ಸಹವಾಚಿತ ಸಮಸಂಖ್ಯೆಯ ಸರ್ಕಾರಿ ಆದೇಶ ದಿನಾಂಕ: 22ನೇ ಜುಲೈ 1989 ಇವುಗಳಲ್ಲಿ ಪರ್ಯಾಲೋಚಿಸಿರುವಂತೆ ನೇರ ನೇಮಕಾತಿಯಲ್ಲಿ ಮೀಸಲಾತಿ ಹಳೆ ಬಾಕಿ (ಬ್ಯಾಕ್‌ಲಾಗ್) ಮತ್ತು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ಎರಡನೇ ತಿದ್ದುಪಡಿ) ಅಧಿನಿಯಮ 2004ರ (ಇಲ್ಲಿ ಇನ್ನು ಮುಂದೆ ಎರಡನೇ ತಿದ್ದುಪಡಿ ಅಧಿನಿಯಮ 2004 ಎಂದು ಉಲ್ಲೇಖಿಸಲಾಗಿದೆ) ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿ ಇರುವ ಸರ್ಕಾರಿ ವಲಯದ ಸಂಸ್ಥೆಯ

ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ 4ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ ಮೀಸಲಾತಿ ಹಳೆ ಬಾಕಿ;

(ii) ಈ ಸಂಬಂಧವಾಗಿ ಹೊರಡಿಸಿದ ಸರ್ಕಾರಿ ಆದೇಶದ ಅನುಸಾರವಾಗಿ ಸರ್ಕಾರಿ ವಲಯ ಸಂಸ್ಥೆಗಳಲ್ಲಿ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವಾಗ ನೇರ ನೇಮಕಾತಿಗೆ ಅನ್ವಯವಾಗುವ ಮೀಸಲಾತಿ ಆದೇಶಗಳಿಗೆ ಅನುಸಾರವಾಗಿ ಅಥವಾ ಸರ್ಕಾರಿ ವಲಯದ ಯಾವುದೇ ಸಂಸ್ಥೆಯಿಂದ ಹೊರಡಿಸಿದ ಯಾವುದೇ ನಿಯಮ, ಪರಿನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶ ಮುಂತಾದವುಗಳಿಗನುಸಾರವಾಗಿ ವರ್ಗೀಕರಿಸಲಾದಂತೆ ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರವಾಗಿ, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡದಿದ್ದಷ್ಟರ ಮಟ್ಟಿಗೆ, ಎರಡನೇ ತಿದ್ದುಪಡಿ ಅಧಿನಿಯಮ 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವಂತೆ ಖಾಲಿ ಹುದ್ದೆಗಳು; ಮತ್ತು

(iii) ಮೇಲಿನ (i) ಮತ್ತು (ii)ನೇ ಖಂಡಗಳಲ್ಲಿ ನಮೂದಿಸಿದ ಭರ್ತಿಮಾಡದ ಖಾಲಿಹುದ್ದೆಗಳನ್ನು ಗಣನೆಗೆ ತೆಗೆದುಕೊಂಡ ಮೇಲೂ ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ನೇರ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳು ಅನ್ವಯವಾಗುವ ಸರ್ಕಾರಿ ವಲಯ ಸಂಸ್ಥೆಗಳಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳನ್ನು ಪ್ರತಿನಿಧಿಸುವ ಶೇಕಡಾವಾರು ನೇರನೇಮಕಾತಿ ಹುದ್ದೆಗಳಲ್ಲಿ ಸಂದರ್ಭಾನುಸಾರವಾಗಿ ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಶೇಕಡಾ ಹದಿನೈದು ಮತ್ತು ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಶೇಕಡಾ ಮೂರು ಮುಟ್ಟಿರದಿದ್ದರೆ ಆಗ ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಅಂಥ ಕಡಿಮೆ ಬಿದ್ದ ಭರ್ತಿ ಮಾಡದಿರುವ ನೇರನೇಮಕಾತಿ ಖಾಲಿ ಹುದ್ದೆಗಳು. (3) ``ಠೇವಣಿದಾರ'' ಎಂದರೆ, ಹಣಕಾಸು ಸಂಸ್ಥೆಯಲ್ಲಿ ಠೇವಣಿ ಇಟ್ಟ ವ್ಯಕ್ತಿ;

**XXX XXX XXX**

**3. ಅನ್ವಯ.-** ಈ ಅಧಿನಿಯಮದಲ್ಲಿರುವುದಾವುದೂ,-

(ಎ) ಸಂಶೋಧನೆಯನ್ನು ನಡೆಸುವ ಅಥವಾ ಅದಕ್ಕೆ ಮಾರ್ಗದರ್ಶನ ನೀಡುವ ಅಥವಾ ನಿರ್ದೇಶಿಸುವ ಸಲುವಾಗಿರುವ ಹುದ್ದೆಗಳಿಗೆ;

(ಬಿ) ವೈಜ್ಞಾನಿಕ ಹುದ್ದೆಗಳೆಂದು ವರ್ಗೀಕರಿಸಲಾಗುವ ಹುದ್ದೆಗಳಿಗೆ;

(ಸಿ) ಸಾವಧಿಕ ಹುದ್ದೆಗಳಿಗೆ;

(ಡಿ) ಯಾವುದೇ ಕರಾರಿನ ಅಧಾರದ ಮೇಲೆ ತುಂಬಲಾದ ಹುದ್ದೆಗಳಿಗೆ;

(ಇ) ಕೇಡರ್ ಹೊರಗಿನ ಹುದ್ದೆಗಳಿಗೆ;

(ಎಫ್) ವರ್ಗಾವಣೆ ಅಥವಾ ಪ್ರತಿನಿಯೋಜನೆಯ ಮೇಲೆ ತುಂಬಲಾದ ಹುದ್ದೆಗಳಿಗೆ;

(ಜಿ) ಸಂವಿಧಾನದಲ್ಲಿರುವ ಯಾವುದೇ ಉಪಬಂಧಕ್ಕನುಸಾರವಾಗಿ ನೇಮಕ ಭರ್ತಿಮಾಡಲಾಗುವ ಹುದ್ದೆಗಳಿಗೆ; ಮತ್ತು

(ಎಚ್) ರಾಜ್ಯ ಸರ್ಕಾರವು, ಆಗಿಂದಾಗ್ಗೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಹುದ್ದೆಗಳಿಗೆ,

-ಅನ್ವಯಿಸತಕ್ಕದ್ದಲ್ಲ;

ಪರಂತು, (ಎಚ್) ಖಂಡದಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು.

**4. ನೇಮಕಾತಿಗಳು ಅಥವಾ ಹುದ್ದೆಗಳ ಮೀಸಲಾತಿ ಮುಂತಾದವು.-** (1) ಗೊತ್ತುಪಡಿಸಲಾದ ದಿನಾಂಕದ ತರುವಾಯ, ಕರ್ನಾಟಕ ರಾಜ್ಯದ ಸಿವಿಲ್ ಸೇವೆಯಲ್ಲಿನ ಯಾವುದೇ ಹುದ್ದೆಗೆ ಅಥವಾ ಕರ್ನಾಟಕ ರಾಜ್ಯದಡಿಯ ಸಿವಿಲ್ ಹುದ್ದೆಗೆ ನೇಮಕಾತಿಗಳನ್ನು ಮಾಡುವಾಗ, ನೇಮಕಾತಿಗಳು ಅಥವಾ ಹುದ್ದೆಗಳನ್ನು ಭಾರತದ ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಸರ್ಕಾರದಿಂದ ಮಾಡಲಾದ ಆದೇಶಗಳಲ್ಲಿ ಆಗಿಂದಾಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಮಾಣದಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ಮೀಸಲಿಡತಕ್ಕದ್ದು.

(1ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನೇಮಕಾತಿ ಪ್ರಾಧಿಕಾರವು, ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿದ್ದಂತೆ ಸರ್ಕಾರಿ ವಲಯ ಸಂಸ್ಥೆಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಟ್ಟ ಭರ್ತಿ ಮಾಡದ ಹುದ್ದೆಗಳನ್ನು ಗುರುತಿಸತಕ್ಕದ್ದು ಮತ್ತು ನಿರ್ದಿಷ್ಟ ಅವಧಿಯೊಳಗೆ ಒಂದು ಸಲದ ಕ್ರಮವಾಗಿ ಅವುಗಳನ್ನು ಭರ್ತಿಮಾಡಲು

ಕ್ರಮ ಕೈಗೊಳ್ಳತಕ್ಕದ್ದು. ಹುದ್ದೆಗಳ ಸಂಖ್ಯೆಯನ್ನು ಲೆಕ್ಕ ಹಾಕುವ ವಿಧಾನ, ಅಂಥ ಹುದ್ದೆಗಳನ್ನು ಭರ್ತಿಮಾಡುವ ಪ್ರಕ್ರಿಯೆ ಹಾಗೂ ಯಾವ ಅವಧಿಯೊಳಗೆ ಕ್ರಮ ಕೈಗೊಳ್ಳಬೇಕು ಎಂಬುದು ರಾಜ್ಯ ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು:

ಪರಂತು, ಈ ಉಪ ಪ್ರಕರಣದ ಉಪಬಂಧಗಳು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳಲ್ಲಿನ ಭರ್ತಿ ಮಾಡದ ಖಾಲಿಹುದ್ದೆಗಳಿಗೆ ಅಥವಾ ಯಾವ ಹುದ್ದೆಗಳ ಸಂಬಂಧದಲ್ಲಿ ಉಪಬಂಧಗಳನ್ನು ಈಗಾಗಲೇ ಕಲ್ಪಿಸಲಾಗಿದೆಯೋ ಆ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ:

ಮತ್ತು ಪರಂತು, ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕಕ್ಕಿಂತ ಮೊದಲು ಎಲ್ಲಾ ಭರ್ತಿಯಾಗದ ಹುದ್ದೆಗಳನ್ನು ಅಥವಾ ಅವುಗಳ ಭಾಗವನ್ನು ಈ ಉಪ ಪ್ರಕರಣದಲ್ಲಿ ಒಳಗೊಂಡಿರುವ ನೇಮಕಾತಿ ಪ್ರಾಧಿಕಾರಗಳು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಂದ ಈಗಾಗಲೆ ಭರ್ತಿ ಮಾಡಿದ್ದರೆ ಆಗ ಅಂಥ ನೇಮಕಾತಿಗಳು ಬಾಧಿತವಾಗತಕ್ಕದ್ದಲ್ಲ.

(2) ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಮಾಡಲಾದ ಸದರಿ ಅದೇಶದ ಉಪಬಂಧಗಳನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಒಂದು ಆದೇಶವೆಂದು ಭಾವಿಸತಕ್ಕದ್ದು ಮತ್ತು ಸರ್ಕಾರಿ ವಲಯದ ಸಂಸ್ಥೆಯ ಒಂದು ಸೇವೆ ಅಥವಾ ಹುದ್ದೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

(3) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಗೊತ್ತುಪಡಿಸಲಾದ ದಿನಾಂಕದ ತರುವಾಯ, ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಭಾವಿಸಲಾದ ಒಂದು ವಿಶ್ವವಿದ್ಯಾನಿಲಯದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಕ್ರಮಕ್ಕೆ ಪ್ರವೇಶಾವಕಾಶವನ್ನು ನೀಡುವಾಗ ನಿಯಮಿಸಬಹುದಾದ ಅಂಥ ಪ್ರಮಾಣದಲ್ಲಿ ಮತ್ತು ಅಂಥ ರೀತಿಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಾತಿಯನ್ನು ಮಾಡತಕ್ಕದ್ದು.

(4) ಈ ಪ್ರಕರಣದ ಉಪಬಂಧಗಳ ಉಲ್ಲಂಘನೆಯಲ್ಲಿ ಮಾಡಲಾದ ಎಲ್ಲ ನೇಮಕಾತಿಗಳು ಶೂನ್ಯಗೊಳಿಸಬಹುದಾದಂಥವುಗಳಾಗಿರತಕ್ಕದ್ದು.

**4ಎ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ನೀಡಿಕೆ.**-(1) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಯಾವನೇ ಅಭ್ಯರ್ಥಿ ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು ಯಾವುದೇ ಸೇವೆಯಲ್ಲಿ ಅಥವಾ ಹುದ್ದೆಯಲ್ಲಿ ಅಥವಾ ಒಂದು ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗ ಕ್ರಮದ ಪ್ರವೇಶಕ್ಕಾಗಿ 4ನೇ ಪ್ರಕರಣದ ಅಡಿಯಲ್ಲಿ ಮೀಸಲಾತಿ ಪ್ರಯೋಜನವನ್ನು ಕ್ಲೇಮು ಮಾಡಲು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಯಾರೇ ಅಭ್ಯರ್ಥಿಯು ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು, ಯಾವುದೇ ಸೇವೆ ಅಥವಾ ಹುದ್ದೆಯಲ್ಲಿನ ನೇಮಕಾತಿ ಅಥವಾ ವಿಶ್ವವಿದ್ಯಾನಿಲಯದ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗಕ್ರಮದ ಪ್ರವೇಶಕ್ಕಾಗಿ 4ನೇ ಪ್ರಕರಣದ ಅಡಿಯಲ್ಲಿ ಮೀಸಲಾತಿ ಪ್ರಯೋಜನವನ್ನು ಕ್ಲೇಮು ಮಾಡಲು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ತಹಶೀಲ್ದಾರನು (1) ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮತ್ತು ತಾನು ಯುಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ನಂತರ ಮತ್ತು ಅರ್ಜಿದಾರನು ಮಾಡಿದ ಕ್ಲೇಮಿನ ಯಥಾರ್ಥತೆಯ ಬಗ್ಗೆ ಅವನಿಗೆ ಮನವರಿಕೆಯಾದರೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಅಥವಾ ಸಂದರ್ಭಾನುಸಾರ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡುವ ಅಥವಾ ಅರ್ಜಿಯನ್ನು ತಿರಸ್ಕರಿಸುವ ಆದೇಶವನ್ನು ಹೊರಡಿಸತಕ್ಕದ್ದು .

(4) ತಹಶೀಲ್ದಾರನು (3)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(5) ಅಭ್ಯರ್ಥಿ ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರೆಂಬುದನ್ನು ರುಜುವಾತು ಪಡಿಸುವುದು ಅರ್ಜಿದಾರನ ಹೊಣೆಯಾಗಿರತಕ್ಕದ್ದು.

**XXX XXX XXX**

**4ಡಿ. ಅಪೀಲು.-** (1) 4ಸಿ ಪ್ರಕರಣದ ಅಡಿಯಲ್ಲಿ ಪರಿಶೀಲನಾ ಸಮಿತಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ,-

(i) ಪರಿಶೀಲನಾ ಪ್ರಮಾಣ ಪತ್ರವು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ ಸಮಾಜ ಕಲ್ಯಾಣ ಆಯುಕ್ತರು / ನಿರ್ದೇಶಕರಿಗೆ;

(ii) ಪರಿಶೀಲನಾ ಪ್ರಮಾಣ ಪತ್ರವು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ
ಬುಡಕಟ್ಟು ಕಲ್ಯಾಣ ನಿರ್ದೇಶಕರಿಗೆ;

(iii) ಪರಿಶೀಲನಾ ಪ್ರಮಾಣ ಪತ್ರವು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ನಿರ್ದೇಶಕರಿಗೆ,

- ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದ ಸಂದಾಯದೊಡನೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ಪ್ರಾಧಿಕಾರವು ಉಭಯ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

**XXX XXX XXX**

**4ಎಫ್. ಡೆಪ್ಯೂಟಿ ಕಮೀಷನರ್‌ರಿಂದ ಪುನರೀಕ್ಷಣೆ.-** (1) ಡೆಪ್ಯೂಟಿ ಕಮೀಷನರನು, ಯಾವುದೇ ಸಮಯದಲ್ಲಿ ತಾನಾಗಿಯೇ ಆಗಲಿ ಅಥವಾ ನಿಯಮಿಸಲಾದ ಅವಧಿಯಲ್ಲಿ ತನಗೆ ಮಾಡಲಾದ ಅರ್ಜಿಯ ಮೇಲಾಗಲಿ, 4ಎ ಪ್ರಕರಣದ ಅಡಿಯಲ್ಲಿ ತಹಶೀಲ್ದಾರನು ಅಥವಾ 4ಬಿ ಪ್ರಕರಣದ ಅಡಿಯಲ್ಲಿ ಅಸಿಸ್ಟೆಂಟ್ ಕಮೀಷನರನು ಕೈಗೊಂಡ ಯಾವುದೇ ತೀರ್ಮಾನ ಅಥವಾ ಹೊರಡಿಸಿದ ಆದೇಶದ ಸಂಬಂಧದಲ್ಲಿ ಅಂಥ ತೀರ್ಮಾನ ಅಥವಾ ಆದೇಶದ ಕಾನೂನು ಸಮ್ಮತತೆ, ಔಚಿತ್ಯದ ಬಗ್ಗೆ ತನಗೆ ಮನವರಿಕೆಯಾಗುವ ಉದ್ದೇಶಕ್ಕಾಗಿ ದಾಖಲೆಗಳನ್ನು ತರಿಸಬಹುದು ಮತ್ತು ಪರೀಕ್ಷಿಸಬಹುದು ಮತ್ತು ಯಾವುದೇ ಪ್ರಕರಣದಲ್ಲಿ ಯಾವುದೇ ಅಂಥ ತೀರ್ಮಾನ ಅಥವಾ ಆದೇಶವನ್ನು ಪರಿವರ್ತಿಸತಕ್ಕದ್ದು, ರದ್ದುಗೊಳಿಸತಕ್ಕದ್ದು, ಪರಿಷ್ಕರಿಸತಕ್ಕದ್ದು ಅಥವಾ ಪುನರ್ ಪರಿಗಣನೆಗಾಗಿ ಮುಂಡಿಸತಕ್ಕದ್ದು ಎಂದು ಡೆಪ್ಯೂಟಿ ಕಮೀಷನರನಿಗೆ ಕಂಡುಬಂದರೆ, ಆತನು ತದನುಸಾರವಾಗಿ ಆದೇಶಗಳನ್ನು ಮೂವತ್ತು ದಿನಗಳೊಳಗಾಗಿ ಹೊರಡಿಸಬಹುದು:

ಪರಂತು, ಡೆಪ್ಯೂಟಿ ಕಮೀಷನರನು ಯಾವೊಬ್ಬ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು, ಅಂಥ ವ್ಯಕ್ತಿಗೆ ಪ್ರತಿಕೂಲಕರವಾದ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಡೆಪ್ಯೂಟಿ ಕಮೀಷನರನು, (1)ನೇ ಉಪ ಪ್ರಕರಣದ ಅಡಿಯಲ್ಲಿನ ತನ್ನ ಅಧಿಕಾರಗಳನ್ನು ಚಲಾಯಿಸುವುದನ್ನು ಕಾಯ್ದಿರಿಸಿ, ಅಂಥ ಯಾವುದೇ ತೀರ್ಮಾನ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

**XXX XXX XXX**

**5ಎ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಪಡೆದಿದ್ದಕ್ಕಾಗಿ ದಂಡಗಳು.-** ಯಾವೊಬ್ಬ ವ್ಯಕ್ತಿಯು,-

(ಎ) ಸುಳ್ಳು ಮಾಹಿತಿಯನ್ನು ಒದಗಿಸಿ ; ಅಥವಾ

(ಬ) ಸುಳ್ಳು ಹೇಳಿಕೆಯನ್ನು ನೀಡಿ ; ಅಥವಾ

(ಸಿ) ಯಾವುದೇ ಇತರ ಮೋಸದ ವಿಧಾನಗಳಿಂದ,

- ಜಾತಿ ಪ್ರಮಾಣಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಆತನು ಆರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ, ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ನ್ಯಾಯಾಲಯವು, ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ದಾಖಲು ಮಾಡಿ, ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**5ಬಿ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ನೀಡಿದ್ದಕ್ಕಾಗಿ ದಂಡ.-** ತಹಶೀಲ್ದಾರನು ಉದ್ದೇಶಪೂರ್ವಕವಾಗಿ ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಆತನು ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ

ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು :

ಪರಂತು, ನ್ಯಾಯಾಲಯವು ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ದಾಖಲ್ಮಾಡಿ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.]1

**XXX XXX XXX**

**8. ಸ್ಥಾಯಿ ಸಮಿತಿಯ ರಚನೆ.-** ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸ್ಥಾಯಿ ಸಮಿತಿ ಇರತಕ್ಕದ್ದು, ಎಂದರೆ:-

(ಎ) ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ .. ಅಧ್ಯಕ್ಷರು

(ಬಿ) (i) ಸಭಾಧ್ಯಕ್ಷರಿಂದ ನಾಮನಿರ್ದೇಶಿತರಾಗಬೇಕಾದ ಕರ್ನಾಟಕ ವಿಧಾನ ಸಭೆಯ ನಾಲ್ವರು ಸದಸ್ಯರು. ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಯವರಾಗಿರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಪಂಗಡದವರಾಗಿರತಕ್ಕದ್ದು ಮತ್ತು ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು. .. ಸದಸ್ಯರು

(ii) ಸಭಾಪತಿಯವರಿಂದ ನಾಮನಿರ್ದೇಶಿತರಾಗಬೇಕಾದ ಕರ್ನಾಟಕ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರು. .. ಸದಸ್ಯರು

(ಸಿ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು .. ಸದಸ್ಯರು

(ಡಿ) ಸರ್ಕಾರದ ಕಾರ್ಯದರ್ಶಿಯವರು, ಗೃಹ ಇಲಾಖೆ, ಕರ್ನಾಟಕ ಸರ್ಕಾರ .. ಸದಸ್ಯರು

(ಇ) ಸರ್ಕಾರದ ಕಾರ್ಯದರ್ಶಿಯವರು, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ .. ಸದಸ್ಯ ಕಾರ್ಯದರ್ಶಿ

ಪರಂತು, ಭಾರತದ ಸಂವಿಧಾನದ 356ನೇ ಅನುಚ್ಛೇದದ ಅಡಿಯಲ್ಲಿ ಒಂದು ಉದ್ಘೋಷಣೆಯನ್ನು ಹೊರಡಿಸಿದ ಮೇಲೆ, ರಾಜ್ಯ ಸರ್ಕಾರವು ತಾನು ಉಚಿತವೆಂದು ಭಾವಿಸುವಮಟ್ಟಿಗೆ ಸಮಿತಿಯ ಅಂಗ ರಚನೆಯನ್ನು ವ್ಯತ್ಯಾಸಗೊಳಿಸಬಹುದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 24ನೇ ಜುಲೈ 2024

KARNATAKA LEGISLATIVE COUNCIL
ONE HUNDRED AND FIFTY THIRD SESSION

# THE KARNATAKA SCHEDULED CASTES, SCHEDULED TRIBES AND OTHER BACKWARD CLASSES (RESERVATION OF APPOINTMENTS ETC.,) (AMENDMENT) BILL, 2024

**(LA Bill No. 39 of 2024)**

**(As passed by the Karnataka Legislative Assembly)**

A Bill further to amend the Karnataka Scheduled Castes, Scheduled Tribes and other Backward Classes (Reservation of Appointments etc.,) Act, 1990.

Whereas it is expedient further to amend the Karnataka Scheduled Castes, Scheduled Tribes and other Backward Classes (Reservation of Appointments etc.,) Act, 1990 (Karnataka Act No. 7 of 1991) for the purposes hereinafter appearing;

Be it enacted by Karnataka State Legislature in the seventy fifth year of the Republic of India as follows:-

**1. Short title and commencement.-** (1) This Act may be called the Karnataka scheduled castes, scheduled tribes and other backward classes (Reservation of Appointments etc.,) (Amendment) Act, 2024.

(2) It shall come into force at once.

**2. Amendment of section 2.-** In the Karnataka Scheduled Castes, Scheduled Tribes and other Backward Classes (Reservation of Appointments etc.,) Act, 1990 (Karnataka Act No.7 of 1991) (hereinafter referred to as the principal Act), in section 2,-

(i) after clause (2), the following shall be inserted, namely:-

"(2-a) "Appointment on outsource" means appointment to any post in the cadre of the State civil services or establishments in public sector, against direct recruitment quota by a manpower supply agency recognised by the Government."

(ii) after clause (4), the following shall be inserted, namely:-

"(4-a)" Period specific post" or "tenure post" means a permanent post held by a Government servant in a service or post under State Government or in the establishment in public sector for a period of not more than forty-five days, without reappointment."

(iii) in clause (8),-

(a) in sub-clause (i), for the brackets, words and figures "the Karnataka Scheduled Castes, Scheduled Tribes and other Backward classes (Reservation of Appointment etc) (Second Amendment) Act, 2004 (hereinafter referred to as the Second Amendment Act, 2004), the words, "each time of the direct recruitment" shall be substituted;

(b) in sub-clauses (ii) and (iii), for the words and figure "the Second Amendment Act, 2004" the words, "each time of the direct recruitment" shall be substituted.

**3. Amendment of section 3.-** In section 3 of the principal Act,-

(i) for clauses (a),(b) and (c), the following shall be substituted, namely:-

"(a) posts above the cadre of Group 'A' (Junior Scale) meant for conducting or guiding or directing research;

(b) posts above the cadre of Group 'A' (Junior Scale) classified as scientific posts;

(c) period specific posts or tenure posts filled on temporary, part time, contract basis for period less than 45 days".

(ii) clause (d) shall be omitted.

**4. Amendment of section 4.-** In section 4 of the principal Act,-

(i) in sub-section (1A), for the words, bracket and figures "(Second Amendment) Act, 2004", in the two places where they occur, the words, "each time of the direct recruitment" shall be substituted; and

(ii) after sub-section (4), the following shall be inserted, namely:-

“(5) A manpower supply agency recognised by the Government while making appointment on the basis of outsource against direct recruitment quota to any post in the cadre of the State civil services or establishments in public sector has to ensure that adequate representation is given to the members of the Scheduled Castes, Scheduled Tribes and Other Backward Classes to such extent and in such manner as may be prescribed:

Provided that, the appointment on the basis of outsource shall be on temporary basis and shall not be regularized against direct recruitment quota.

Provided further that, the appointment on the basis of outsource shall not exceed ten percent of the sanctioned strength of the post against direct recruitment.

Provided also that, on or before the commencement of the Karnataka scheduled castes, scheduled tribes and other backward classes (Reservation of Appointments etc.,) (Amendment) Act, 2024 if the appointment on the basis of outsource exceeds ten percent of the sanctioned strength of the post, then such appointments shall be reduced every year by ten percent.

(6) The terms and conditions of outsource appointment and recognition of agency shall be specified by an order issued by the Government from time to time.”

**5. Amendment of section 4A.-** In section 4A of the principal Act, after sub-section (5), the following shall be inserted, namely:-

“(6) The Tahsildar may at any time either suo-motu or on an application made to him by any person regarding false caste certificate, shall examine the records relating to the cast, and if in his opinion that the person against whom the allegation is made has obtained the caste certificate by furnishing false

information found true, he shall cancel the caste certificate issued by him forthwith:

Provided that, the Tahasildar shall not pass any order of cancellation unless such person is given an opportunity of being heard".

**6. Amendment of section 4D.-** In section 4D of the Principal Act, in sub-section (2), after the words “deems fit”, the words “within a period of four months from the date of receipt of appeal.”, shall be inserted.

**7. Amendment of section 4F.-** In section 4F of the Principal Act, after sub-section (2), the following shall be inserted namely:-

"(3) After passing the orders under sub-section (1), the Deputy Commissioner shall report to the concerned competent authority to place the concerned Tahsildar under suspension for issue of false caste certificate. The concerned competent authority shall act upon the report within fifteen days after receipt of the report pending enquiry.

(4) In case of other officials who are responsible for recommending and submitting false report regarding the caste certificate, the Deputy Commissioner shall place them under suspension immediately pending enquiry".

**8. Amendment of section 5A.-** In section 5A of the Principal Act, for the words "one thousand" and "five thousand", the words "five thousand” and “twenty five thousand” respectively shall be substituted.

**9. Amendment of section 5B.-** In section 5B of the Principal Act, for the words "one thousand" and "five thousand", the words "five thousand” and “twenty five thousand” shall respectively be substituted.

**10. Insertion of new section 5C.-** After section 5B of the Principal Act, the following shall be inserted, namely:-

"**5C. Penalty for submission of false report by the reporting officer and official.-** (1) If an officer and official functioning as enquiry authority regarding caste certificate cases intentionally or negligently prepares any report and submit the same to the District Caste Verification Committee or to the Tahsildar, so as to enable a person who is not a member of the Scheduled Castes or Scheduled Tribes, to secure validity certificate or caste certificate of the Scheduled Castes or Scheduled Tribes from the District Caste Verification Committee or Tahsildar respectively shall be liable for criminal action and shall on conviction, be punishable with rigorous imprisonment for a term which shall not be less than six months but which may extend up to two years and with fine which shall not be less than five thousand rupees but which may extend to twenty five thousand rupees.

(2) The officer or official submitting false report shall also be liable for departmental disciplinary action under the relevant service rules for dereliction of duty.”

**11. Amendment of section 8.-** In section 8 of the principal Act,-

(i) after the heading existing provision shall be renumbered as sub-section (1) thereof and in sub-section (1) as so renumbered,-

(a) after item (d), the following shall be inserted, namely:-

“(d-1) The Secretary to Government, Revenue Department,

Government of Karnataka - Ex-officio Member”

(b) in clause (e) the symbol and words “& Labour Department” shall be omitted.

(ii) after sub-section (1) as so renumbered and the proviso, the following shall be inserted, namely:-

“(2) The standing committee shall meet at least twice in a year.”

**12.Power to remove difficulty.-**(1) If any difficulty arises in giving effect to the provisions of this Act, the State Government may, by order published in the Official Gazette, make such provisions, not inconsistent with the provisions of this Act, as may appear to it to be necessary for removing the difficulty.

Provided that, no such order shall be made under this section after the expiry of a period of two years from the date of commencement of this Act.

(2) Every order made under sub-section (1), shall be laid, as soon as may be after it is made, before each house of the State Legislature.

## STATEMENT OF OBJECTS AND REASONS

**(As appended to at the time of Introduction)**

It is considered necessary to amend the Karnataka Scheduled Castes, Scheduled Tribes and other Backward Classes (Reservation of Appointments etc,.) Act, 1990 to provide for,-

(i) define "tenure posts" to remove the ambiguity in the Act;

(ii) define " unfilled vacancies" so that it is a continuing process;

(iii) provide reservation so as to create various employment opportunities to the Scheduled Castes, Scheduled Tribes and other Backward Classes Reservation in the process of appointment on contract basis in Government departments, Boards, Corporations and Universities etc;

(iv) follow the reservation in the appointment of the posts on outsource basis against direct recruitment quota; and

(v) such other consequential amendments are also made.

Hence, the Bill.

## FINANCIAL MEMORANDUM

There is no extra expenditure involved by the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause :4** | Sub-clause (ii), empowers the State Government to make rules regarding the manner and extent in which a manpower supply agency recognised by the Government while making appointment on the basis of outsource against direct recruitment quota to any post in the cadre of the State civil services or establishments in public sector has to ensure that adequate representation is given to the members of the Scheduled Castes, Scheduled Tribes and Other Backward Classes. |

The proposed delegation of legislative power is normal in character.

**Dr. H.C. MAHADEVAPPA**
Minister for Social Welfare

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE KARNATAKA SCHEDULED CASTES, SCHEDULED TRIBES AND OTHER BACKWARD CLASSES (RESERVATION OF APPOINTMENTS ETC.,) ACT, 1990

**XXX XXX XXX**

**2. Definitions.-** In this Act, unless the context otherwise requires ,-

(1) "appointed day" means the date notified under sub-section (2) of section 1;

(2) "appointing authority" in relation to a service or posts, means the authority empowered to make appointment to such service or post;

(3) "establishments in public sector" means,-

(i) a co-operative society registered or deemed to have been registered under the Karnataka Co-operative Societies Act, 1959;

(ii) an educational institution established or maintained or aided by the State Government; 8

(iii) a Government company within the meaning of section 617 of the Companies Act, 1956;

(iv) a local authority;

(v) a statutory body or corporation established by or under a State or Central Act owned or controlled by the State Government;

(vi) a university established or deemed to have been established by or under any law of the State Legislature;

(4) "other backward Classes" means the communities, castes and tribes notified by the State Government from time to time under Article 15(4) and Article 16 (4) of the Constitution;

(5) "Scheduled Castes" shall have reference to the Scheduled Castes specified in the Constitution (Scheduled Castes) Order, 1950 made under Article 341 of the Constitution of India and as amended from time to time;

(6) "Scheduled Tribes" shall have reference to the Scheduled Tribes specified in the Constitution (Scheduled Tribes) Order, 1950 made under Article 342 of the Constitution of India and as amended from time to time;

7) "service or post" means a civil service of the State of Karnataka or a civil post under the State of Karnataka, and includes a service or post in the establishment in public sector;

(8) "Unfilled vacancies" means and includes,-

(i) the backlog in direct recruitment as contemplated in the Government order No. DPAR 19 SBC 89 dated 12th July 1989 read with the subsequent Government Order of

even number, dated 22nd July 1989 and sub-section (2) of section 4 in respect of a service or post in an establishment in public sector existing as on the date of commencement of the Karnataka Scheduled Castes, Scheduled Tribes and Other Backward Classes (Reservation of Appointment etc.) (Second Amendment) Act, 2004 (hereinafter referred to as the Second Amendment Act, 2004);

(ii) the vacancies to the extent they were not filled by the persons belonging to the Scheduled Castes or the Scheduled Tribes, as the case may be, as per the classification of the vacancies in accordance with the orders of reservation applicable to direct recruitment while regularising the services of the daily wage employees in an establishment in public sector in accordance with the Government Order issued in this behalf or any rule, statute, bye law, regulation or order etc. issued by any establishment in public sector, and existing as on the date of commencement of the Second Amendment Act, 2004; and

(iii) if even after taking into account the unfilled vacancies mentioned in clauses (I) and (ii) above, the percentage of representation of the persons belonging to the Scheduled Castes and the Scheduled tribes in any service or post in an establishment in public sector 9 to which the order of reservation in direct recruitment under clause (4) of Article 16 of the Constitution are applicable, does not reach fifteen percent in respect of the persons belonging to the Scheduled Castes and three percent in respect of the persons belonging to the Scheduled tribes, as the case may be, of direct recruitment vacancies, then such shortfall of unfilled direct recruitment vacancies existing as on the date of commencement of the Second Amendment Act, 2004.

**XXX** **XXX** **XXX**

**3. Applicability.-** Nothing in this Act, shall apply to ,-

(a) posts meant for conducting or guiding or directing research;

(b) posts classified as scientific posts;

(c) tenure posts;

(d) posts filled up on the basis of any contract;

(e) ex-cadre posts;

(f) posts which are filled up by transfer or deputation;

(g) posts in respect of which recruitment is made in accordance with any provision contained in the Constitution; and

(h) such other posts as the State Government may, from time to time, by order, specify:

Provided that every order made under clause (h) shall be laid as soon as may be after it is made before each House of the State Legislature while it is in session for a total period of fourteen days which may be comprised in one session or in two or more successive sessions.

**4. Reservation of appointments or posts etc.-** (1) After the appointed day, while making appointments to any office in a civil service of the State of Karnataka or to a civil post under the State of Karnataka, appointments or posts shall be reserved for the members of the Scheduled Castes, Scheduled Tribes and other Backward Classes to such extent and in such manner as may be specified from time to time in the order made by the Government under clause (4) of Article 16 of the Constitution of India.

(1A) Notwithstanding anything contained in any law for the time being in force, the appointing authority shall identify unfilled vacancies reserved for the persons belonging to Scheduled Castes and Scheduled Tribes in any service or post in an establishment in public sector as existing on the date of commencement of the Second Amendment Act, 2004 and take action to fill them as a one time measure within a specified time. The manner in which the number of vacancies is to be computed, the procedure for filling such vacancies and the time within which action is to be taken shall be as specified by notification by the State Government:

Provided that the provisions of this sub-section shall not apply to any unfilled vacancy in Karnataka State Civil Services or post in respect of which provisions have been already made:

Provided further that where the appointing authorities covered under this sub-section have already filled all or part of the unfilled vacancies before the date of coming into force of the Second Amendment Act, 2004 by making appointment of persons belonging to the Scheduled Castes and the Scheduled Tribes, then such appointments shall not be affected.

(2) The provisions of the said order made under clause (4) of Article 16 of the Constitution shall be deemed to be an order made under this Act and shall mutatis mutandis apply to a service or post in an establishment in public sector.

(3) Subject to such rules as may be prescribed, while making admissions, after the appointed day, to a course of study in a university established or deemed to be established by or under any law of the State Legislature or an educational institution established or maintained or aided by the State Government, there shall be made reservation for the persons belonging to the Scheduled Castes, the Scheduled Tribes and other Backward Classes to such extent and in such manner as may be prescribed.

(4) All appointments made in contravention of the provisions of this section shall be voidable.

**4A. Issue of caste certificate and income and caste certificate.-** (1) Any candidate or his parent or guardian belonging to the Scheduled Castes or the Scheduled Tribes may, in order to claim benefit of reservation under section 4, either for appointment to any service or post or for admission to a course of study in a university or any educational institution, make an application to the Tahasildar in such form and in such manner as may be prescribed for issue of a caste certificate.

(2) Any candidate or his parent or guardian belonging to other Backward Classes may, in order to claim benefit of reservation under section 4 either for appointment to any

service or post or for admission to a course of study in a university or any educational Institution, make an application to the Tahasildar in such form and in such manner as may be prescribed for issue of an income and caste certificate.

(3) The Tahasildar may, on receipt of an application under sub-section (1) or (2), and after holding such enquiry as he deems fit and satisfying himself regarding the genuineness of the claim made by applicant pass an order issuing a caste certificate or, as the case may be, an income and caste certificate in such form as may be prescribed, or rejecting the application.

(4) The Tahasildar shall follow such procedure as may be prescribed before passing the order under sub-section (3).

(5) The burden of proving that the candidate or his parent or guardian belongs to Scheduled Castes, Scheduled Tribes or other Backward Classes shall be on the applicant

**XXX XXX XXX**

**4D. Appeal.-** (1) Any person aggrieved by an order passed by the Verification Committee under section 4C may, within thirty days from the date of receipt of the order appeal,-

(i) to the Commissioner / Director, Social Welfare in case the verification certificate relates to a person belonging to the Scheduled Castes;

(ii) to the Director, Tribal Welfare in case the verification certificate relates to a person belonging to the Scheduled Tribes;

(iii) to the Director, Backward classes Department, in case the verification certificate relates to a person belonging to other Backward Classes;

in such form and in such manner and on payment of such fee as may be prescribed.

(2) The Appellate Authority shall after giving to both the parties an opportunity of being heard pass such order in appeal as it deems fit.

**XXX XXX XXX**

**4F. Revision by Deputy Commissioner.-** (1) The Deputy Commissioner may at any time either suomoto or on an application made to him with in the prescribed period, call for and examine the records relating to any decision made or order passed by the Tahasildar under section 4A or the Assistant Commissioner under section 4B, for the purposes of satisfying himself as to the legality, propriety of such decision or order and if, in any case, it appears to the Deputy Commissioner that any such decision or order shall be modified, annulled, revised or remitted for reconsideration, he may pass orders within thirty days accordingly;

provided that the Deputy Commissioner shall not pass any order prejudicial to any person unless such person is given an opportunity of being heard.

(2) The Deputy Commissioner may, stay the execution of any such decision or order pending the exercise of his powers under sub-section (1) in respect thereof.

**XXX** **XXX** **XXX**

**5A. Penalties for obtaining false Caste Certificate or Income and Caste Certificate.-** Whoever has obtained a Caste Certificate or Income and Caste Certificate by;-

(a) furnishing false information; or

(b) filing a false statement; or

(c) any other fraudulent means.

shall on conviction be punishable with rigorous imprisonment for a term which shall not be less than six months but which may extend upto two years and with fine which shall not be less than one thousand rupees but which may extend upto five thousand rupees:

Provided that the Court may, for adequate and special reasons to be recorded, impose a sentence of imprisonment for a lesser term or lesser fine.

**5B. Penalty for issuing a false Caste Certificate or Income and Caste Certificate.-** If the Tahasildar intentionally issues a false Caste Certificate or Income and Caste Certificate, he shall on conviction, be punishable with rigorous imprisonment for a term which shall not be less than six months but which may extend upto two years and with fine which shall not be less than one thousand rupees but which may extend to five thousand rupees:

provided that the Court may, for adequate and special reasons to be recorded, impose a sentence of imprisonment for a lesser term or lesser fine.

**XXX** **XXX** **XXX**

**8. Constitution of Standing Committee.-** There shall be a standing committee consisting of the following members, namely:-

| | | |
|---|---|---|
| (a) | Minister of Social Welfare, Government of Karnataka | Chairman |
| (b) | (i) Four members of the Karnataka Legislative Assembly to be nominated by the Speaker out of whom, one shall be from the Scheduled Caste and one shall be from the Scheduled Tribe and one shall be from the Backward Classes; | Members |
| | (ii) Two members of the Karnataka Legislative Council to be nominated by the Chairman | Members |
| (c) | Chief Secretary to the Government of Member Karnataka | Member |
| (d) | Secretary to Government, Home Department, Government of Karnataka | Member |
| (e) | Secretary to Government, Social Welfare & Labour Department, Government of Karnataka | Member Secretary |

Provided that on issue of a proclamation under Article 356 of the Constitution of India, the composition of the Committee may be altered by the State Government to such extent as it deems fit.

**XXX** **XXX** **XXX**

Govt. Press, Vikasa Soudha, Bengaluru, 24th July, 2024, P7, W.D., Copies 300